PW2

ಅಸಲ ದಾವಾ .ನಂ.615/2024

**ಮೆ॥ ಪ್ರದಾನ ಹಿರಿಯ ದಿವಾಣಿ ನ್ಯಾಯಾಧೀಶರು ಗೋಕಾಕ ಇವರ ನ್ಯಾಯಾಲಯದಲ್ಲಿ**

ನಡುವೆ :

1] ಶ್ರೀಮತಿ ಬಾಯವ್ವ ಕೋಂ ಬಸಲಿಂಗಪ್ಪ ಕೊಚ್ಚರಗಿ
ಹಾಗೂ ಇತರರು

.....ವಾದಿಯರು

ಮತ್ತು :

1] ಶ್ರೀ. ಮಹಾಂತೇಶ ತಂದೆ ಬಸವಣ್ಣೆಪ್ಪ ಅಕ್ಕಿ
ಹಾಗೂ ಇತರರು

......ಪ್ರತಿವಾದಿಯರು

NOTARY
R.S. Beerannavar
Gokak Rev. Taluka
District:Belagavi
Regd. No.Law/
LCL-213/2025
Exp.16-11-2030
GOVT. OF KARNATAKA

**ಪಿ.ಡಬ್ಲ್ಯೂ-2 ಇವರ ಸಾಕ್ಷಿ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಮೂಲಕ**

ಇದರಲ್ಲಿ ನಾನು ಶ್ರೀ ಯಲ್ಲಪ್ಪ ಭೀಮಪ್ಪ ಅಕ್ಕಿ ವಯಾ: 55 ವರ್ಷ, ಉದ್ಯೋಗ: ಒಕ್ಕಲುತನ, ಸಾ: ಶಿಲ್ತಿಭಾಂವಿ ತಾ: ಗೋಕಾಕ ಈ ಹೊತ್ತು ಮುಕ್ಕಾಂ ಗೋಕಾಕಯಲ್ಲಿ ಸತ್ಯ ಪ್ರತಿಜ್ಞೆಯ ಮೇರೆಗೆ ಮಾಡುವ ಸಾಕ್ಷಿ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಏನೆಂದರೆ:-

24/6.

1. ನಾನು ಖಾಯಂ ತರೀಖ ಈ ಮೇಲಿನ ವಿಳಾಸದಲ್ಲಿ ಕುಟುಂಬ ಸಮೇತ ವಾಸವಾಗಿರುತ್ತೇನೆ. ನನಗೆ ಸದರಿ ದಾವೆಯ ವಾದಿ ಮತ್ತು ಪ್ರತಿವಾದಿಯರ ಪರಿಚಯವಿದ್ದು, ದಾವಾ ಆಸ್ತಿಗಳ ಬಗ್ಗೆ ಮಾಹಿತಿ ಇರುತ್ತದೆ. ಕಾರಣ ನನಗೆ ಈ ಸಾಕ್ಷಿ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಮಾಡುವ ಅಧಿಕಾರವಿರುತ್ತದೆ.

p.le
(BPAK)
Adv for
Defendant.

2. ವಾದಿಯರು ಹಾಗೂ ಪ್ರತಿವಾದಿಯರು ಮೂಲತಃ ಒಂದೇ ಕುಟುಂಬದ ಸದಸ್ಯರು ಇದ್ದು, ಒಬ್ಬರಿಗೊಬ್ಬರು ಸಂಬಂಧಿಕರು ಇರುತ್ತಾರೆ. ವಾದಿಯರ ಮೂಲ ಪುರುಷ ದುಂಡಪ್ಪ ಈತನಿಗೆ 6 ಜನ ಹೆಣ್ಣು ಮಕ್ಕಳು ಮಾತ್ರ ಇದ್ದು ಯಾವುದೇ ಗಂಡು ಮಕ್ಕಳು ಇರುವುದಿಲ್ಲ. 6 ಜನ ಹೆಣ್ಣು ಮಕ್ಕಳಲ್ಲಿ ಈಗಾಗಲೇ ಮೂವರು ಹೆಣ್ಣು ಮಕ್ಕಳು ಮೃತವಾಗಿದ್ದು, ವಾದಿಯರು ಮೂಲ ಪುರುಷ ದುಂಡಪ್ಪನ ಹೆಣ್ಣು ಮಕ್ಕಳು, ಹೆಣ್ಣು ಮಕ್ಕಳ ಗಂಡ ಮತ್ತು ಮಕ್ಕಳು ಇರುತ್ತಾರೆ.

3. ದಾವಾ ಆಸ್ತಿಗಳು ಜಮೀನು ಮತ್ತು ಮನೆಗಳು ಇದ್ದು, ವಾದಿಯರು ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಗಳು ಇರುತ್ತದೆ. ಸದರಿ ದಾವಾ ಆಸ್ತಿಗಳಲ್ಲಿ

No. of CORRECTIONS

ವಾದಿಯರು ಮತ್ತು ಪ್ರತಿವಾದಿಯರು ಸಾಮೂಹಿಕ ಜಂಟಿ ಕಬ್ಜಾ ವಹಿವಾಟಿಯಲ್ಲಿರುತ್ತಾರೆ. ಹಾಗೂ ವಾದಿಯರು ಮತ್ತು ಪ್ರತಿವಾದಿಯರು ದಾವಾ ಆಸ್ತಿಗಳ ಸಾಮೂಹಿಕ ಕಬ್ಜಾ ವಹಿವಾಟಿ ಹೊಂದಿ ಉಪಭೋಗ ವಹಿವಾಟ ಮಾಡುತ್ತಾ ಬಂದಿರುತ್ತಾರೆ. ಇದುವರೆಗೆ ಸದರಿ ದಾವಾ ಆಸ್ತಿಗಳಲ್ಲಿ ಯಾವುದೇ ಪಾಲು ವ ವಾಟ್ನಿಯಾಗಿರುವುದಿಲ್ಲ. ವಾದಿಯರು ಮೂಲ ಪುರುಷ ದುಂಡಪ್ಪ ಇವರ ಮರಣಾಂತರ ಅವರ ವಾರಸಾನಾತೆಯಿಂದ ಅಂದರೆ ಅವರ ಪಾಲಿನ ದಾವಾ ಆಸ್ತಿಗಳಲ್ಲಿ ಹಕ್ಕು ವ ಹಿತ ಸಂಬಂಧ ಹೊಂದಿರುತ್ತಾರೆ. ವಾದಿಯರು ಈ ದಾವೆ ದಾಖಲಿಸುವ ಮೊದಲು ದಾವಾ ಆಸ್ತಿಗಳಲ್ಲಿಯ ತಮ್ಮ ಪಾಲಿನ ಹಿಸ್ಸೆಯನ್ನು ಪ್ರತ್ಯೇಕಿಸಿ ವಾಟ್ನಿ ಮಾಡಿಕೊಡುವಂತೆ ಹಿರಿಯರ ಮುಖಾಂತರ ಕೇಳಿದಾಗ ಪ್ರತಿವಾದಿಯರು ಅದಕ್ಕೆ ನಿರಾಕರಿಸಿದ್ದರಿಂದ ವಾದಿಯರು ಪ್ರತಿವಾದಿಯರ ವಿರುದ್ಧ ದಾವಾ ಆಸ್ತಿಗಳಲ್ಲಿಯ ತಮ್ಮ ಪಾಲನ್ನು ವಾಟ್ನಿ ಮಾಡಿ ಪ್ರತ್ಯೇಕ ಕಬ್ಜಾ ಕೊಡಿಸುವಂತೆ ಕೋರಿ ಮಾನ್ಯ ನ್ಯಾಯಾಲಯಕ್ಕೆ ಈ ದಾವೆ ದಾಖಲ ಮಾಡಿಕೊಂಡಿದ್ದು ಇರುತ್ತದೆ.

ಕಾರಣ ಮೆ॥ ರವರು ವಾದಿಯರ ಮಾಗಣಿಯನ್ನು ಪರಿಗಣಿಸಿ ವಾದಿಯರ ದಾವೆಯನ್ನು ಡಿಕ್ರಿ ಮಾಡುವುದಾಗಬೇಕು ಅಂತಾ ಸತ್ಯ ಪ್ರತಿಜ್ಞೆಯ ಮೇರೆಗೆ ಮಾಡಿದ ಸಾಕ್ಷಿ ಮುಖ್ಯ ವಿಚಾರಣೆ ಪ್ರಮಾಣ ಪತ್ರ.

ಈ ಮೇಲೆ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ಯಾವತ್ತು ವಿಷಯ ನನ್ನ ಸ್ವಂತ ಮಾಹಿತಿಯ ಪ್ರಕಾರ ಹೇಳಿ ಬರೆಸಿದ್ದು ಅದು ಸಂಪೂರ್ಣ ನಿಜವಿರುತ್ತದೆ.

ಸ್ಥಳ: ಗೋಕಾಕ
ದಿನಾಂಕ: 24/06/2026

ಪ್ರಮಾಣ ಕರ್ತ

"ಸದರಿಯವರ ಪರಿಚಯವಿದೆ"

ಎಮ್.ಬಿ.ಕಡ್ಲಿ
ವಕೀಲರು – ಗೋಕಾಕ

NOTARY * GOVT. OF KARNATAKA * R.S. Beerannavar Gokak Rev. Taluka District Belagavi Regd. No. Law/ LCL-213/2025 Exp. ...

Sworn to before me

R. S. BEERANNAVAR
B.Com., LL.B. (Spl.)
ADVOCATE & NOTARY, GOKAK.

24 JUN 2026

No. of CORRECTIONS